‘ದೊಡ್ಡವಳಾಗು’ ಎಂದು ಅಮ್ಮ ಹೇಳಿದ ಶಬ್ದ, ಆಗ ನನಗೆ ಅರ್ಥವಾಗಿರಲಿಲ್ಲ. ನನ್ನ ವಯಸ್ಸು ದಿನೇದಿನೇ ಹೆಚ್ಚುತ್ತಿತ್ತು. ನಾನು ದೊಡ್ಡವಳಾಗುವ ಅರ್ಥವೇನಾಗಿತ್ತು?

ಅಮ್ಮ ಹೊರಟು ಹೋಗಿದ್ದರು. ನಾನು ಎರಡು ದಿನ ನೂತನ್ ಸೋದರತ್ತೆಯವರ ಮನೆಯಲ್ಲಿದ್ದೆ. ಅಮ್ಮ ಮರಳಿ ಬಂದಾಗ, ನನ್ನ ಟಿ.ಸಿ. ಸಿಕ್ಕಿರುವುದಾಗಿಯೂ, ಈಗ ನನ್ನನ್ನು ಭೋಪಾಲದ ಶಾಲೆಯೊಂದಕ್ಕೆ ಸೇರಿಸುವುದಾಗಿಯೂ ಹೇಳಿದರು. ನನಗೆ ಖುಷಿಯಾಯಿತು. ನಾನೂ ಸಹ ಈಗ ಮಂಡಲಾಕ್ಕೆ ಮರಳಿ ಹೋಗಲು ಬಯಸುತ್ತಿರಲಿಲ್ಲ. ದೊಡ್ಡ ನಗರದ ಆಕರ್ಷಣೆ ನನಗಿಷ್ಟವಾಗುತ್ತಿತ್ತು.

ಅದೊಂದು ದಿನ ನನ್ನನ್ನು ವಿದ್ಯಾರ್ಥಿನಿಯರ ಒಂದು ಶಾಲೆಗೆ ಸೇರಿಸಲಾಯಿತು. ಅದು ಆಂಗ್ಲ ಮಾಧ್ಯಮದ ಶಾಲೆಯಾಗಿತ್ತು, ಆದರೆ ಅದನ್ನು ‘ಹಿಂಗ್ಲಿಶ್‌ಸ್ಕೂಲ್’ ಎಂದು ಹೇಳಬಹುದಾಗಿತ್ತು. ಆ ಶಾಲೆಯ ಬಹುತೇಕ ವಿದ್ಯಾರ್ಥಿನಿಯರು ಮಧ್ಯಮ ವರ್ಗದವರಾಗಿದ್ದರು, ಅವರ ಮನೆಗಳಲ್ಲಿ ಹಿಂದಿಯನ್ನೇ ಮಾತನಾಡಲಾಗುತ್ತಿತ್ತು. ಆದರೂ ಅವರ ತಂದೆತಾಯಿ, ತಮ್ಮ ಹೆಣ್ಣು ಮಕ್ಕಳು ಧಾರಾಪ್ರವಾಹ ಇಂಗ್ಲಿಷ್ ಮಾತನಾಡುತ್ತಾರೆ ಎಂದು ಯೋಚಿಸಿ ಸಂತಸಪಡುತ್ತಿದ್ದರು; ಆದರೆ ಇದು ಸಾಧ್ಯವೇ ಇರಲಿಲ್ಲ. ಶಾಲೆಯಲ್ಲಿ ನನ್ನ ಮೊದಲ ದಿನ ಹೆದರಿಕೊಳ್ಳುತ್ತಲೇ ಕಳೆಯಿತು. ಅಪರಿಚಿತ ಶಾಲೆ, ಅಪರಿಚಿತ ಅಧ್ಯಾಪಕಿಯರು ಮತ್ತು ಅಪರಿಚಿತ ಸಹಪಾಠಿಗಳು. ಅವರ ಮನಸ್ಸಿನಲ್ಲೂ ನನ್ನ ಬಗ್ಗೆ ಕುತೂಹಲವಿರಬೇಕು. ವಿಶೇಷ ಎಂದರೆ ಮರುದಿನವೇ ನನಗೊಬ್ಬಳು ಸ್ನೇಹಿತೆಯಾದಳು. ಕ್ರಮೇಣ ಹೊಸ ಶಾಲೆಯ ಬಗ್ಗೆ ನನ್ನ ಮನಸ್ಸು ಹೊಂದಿಕೊಂಡಿತು.

‘ಸುಗಂಧಾ! ನಿನ್ನ ಸಾಮಾನುಗಳನ್ನೆಲ್ಲಾ ಜೋಡಿಸಿಕೋ, ಇನ್ನು ನಾವೊಂದು ಬಾಡಿಗೆಯ ಮನೆಯಲ್ಲಿರೋಣ.’ ಅದೊಂದು ದಿನ ಅಮ್ಮ ಅಕಸ್ಮಾತ್ ಹೇಳಿದರು.

‘ಹೂಂ’ ನಾವು ನೂತನ್ ಸೋದರತ್ತೆಯವರ ಮನೆಯಲ್ಲಿ ಹೆಚ್ಚು ದಿನ ಇರಲು ಸಾಧ್ಯವಿಲ್ಲ ಎಂಬುದನ್ನು ನಾನು ಅರ್ಥ ಮಾಡಿಕೊಂಡಿದ್ದೆ. ನೂತನ್ ಸೋದರತ್ತೆಯವರ ಮನೆಯನ್ನು ತ್ಯಜಿಸುವಾಗ ಒಂದೆಡೆ ನನಗೆ ದುಃಖವಾಗಿತ್ತು, ಇನ್ನೊಂದೆಡೆ ಸಂತಸವೂ ಆಗಿತ್ತು. ಸಂತಸ ಏಕೆಂದರೆ, ನೂತನ್ ಸೋದರತ್ತೆಯವರ ಮನೆಯಲ್ಲಿ ಅವರ ಲಿಪ್‌ಸ್ಟಿಕ್, ಅವರ ಪೌಡರ್, ಅವರ ಗೌನ್, ಅವರ ಸೀರೆಗಳು, ಅಲ್ಮಾರಿನಲ್ಲಿ ನೀಟಾಗಿ ಜೋಡಿಸಿದ್ದ ಸುಂದರ ಶೋಪೀಸ್ ಎಲ್ಲವನ್ನೂ ಸ್ಪರ್ಶಿಸಿ ನೋಡುವುದು ಸಾಧ್ಯವಿರಲಿಲ್ಲ. ಅಮ್ಮ ನನಗೆ ಬೇರೆಯವರ ವಸ್ತುಗಳನ್ನು ಮುಟ್ಟಬಾರದು ಎಂದು ಕಲಿಸಿದ್ದರು. ಅವರ ಎಲ್ಲಾ ವಸ್ತುಗಳನ್ನು ನಾನು ಮುಟ್ಟಬಾರದೆಂಬ ವೇದನೆಯಿಂದ ನನಗೆ ಮುಕ್ತಿ ಲಭಿಸುವುದಿತ್ತು. ಆದರೆ ನೂತನ್ ಸೋದರತ್ತೆ ನನಗೂ ತುಂಬಾ ಇಷ್ಟವಾಗುತ್ತಿದ್ದರು, ನಾನು ಅವರಂತೆ ಆಗಲು ಕನಸು ಕಾಣುತ್ತಿದ್ದೆ, ಆದರೆ ನಮ್ಮ ಪರಿಸ್ಥಿತಿ ಅವರಂತಿರಲಿಲ್ಲ.

ಅಮ್ಮನಿಂದ, ನೂತನ್ ಸೋದರತ್ತೆಯವರ ಗಂಡ ಮರಳಿ ಬರುವವರಿದ್ದಾರೆ, ಅವರು ಬರುವುದಕ್ಕೆ ಮೊದಲೇ ನಾವು ಮನೆಯಿಂದ ಹೊರ ಹೋಗಬೇಕು ಎಂಬುದು ತಿಳಿಯಿತು. ಈ ತೀರ್ಮಾನ ನೂತನ್ ಸೋದರತ್ತೆಯವರದ್ದಾಗಿರದೆ, ಅಮ್ಮನ ತೀರ್ಮಾನವಾಗಿತ್ತು. ಅಮ್ಮನ ದೃಷ್ಟಿಯಲ್ಲಿ ನಾನು ತಿಳಿವಳಿಕಸ್ಥಳಾದಾಗ, ಅವರು ತಮ್ಮ ಈ ತೀರ್ಮಾನದ ಬಗ್ಗೆ ಚರ್ಚಿಸುತ್ತಾ ಹೇಳಿದ್ದರು, ‘ನಾನು ಅಲ್ಲಿದ್ದರೆ ನೂತನ್ ಮತ್ತು ನನ್ನ ಸಂಬಂಧ ಹಾಳಾಗಬಹುದು. ಒಂದು ವೇಳೆ ನೂತನ್ ಗಂಡ ನನ್ನಲ್ಲಿ ಆಸಕ್ತಿ ತೋರಲು ಆರಂಭಿಸಿದರೆ, ನನ್ನ ಮತ್ತು ನೂತನ್‌ರ ಪರಿಸ್ಥಿತಿ ಏನಾಗಬಹುದು? ಸುಗಂಧಾ, ಸಂಬಂಧಗಳನ್ನು ತುಂಬಾ ಯೋಚಿಸಿ ನಿರ್ವಹಿಸಬೇಕಾಗುತ್ತದೆ’.

ಅಮ್ಮ ಸಂಬಂಧಗಳ ಬಗ್ಗೆ ತುಂಬಾ ಎಚ್ಚರಿಕೆಯಿಂದ ಇರುತ್ತಿದ್ದರು. ನಾವು ನಮ್ಮ ಹೊಸ ಮನೆಗೆ ಬಂದೆವು. ಗೃಹಸ್ಥ ಜೀವನದ ಬಗ್ಗೆ ನಮ್ಮ ಬಳಿ ಏನೂ ಇರಲಿಲ್ಲ. ನಾವು ಹೊಸ ಮನೆಗೆ ಬಂದ ದಿನ, ಸಂಜೆ ಅಮ್ಮ ಬಟ್ಟೆಗಳ ತುಂಡುಗಳಿಂದ ತಯಾರಿಸಿದ ಎರಡು ದಪ್ಪ ಹಾಸನ್ನು ತಂದಿದ್ದರು. ರಗ್ಗು ನಮ್ಮ ಬಳಿ ಇದ್ದವು. ಎರಡು ಹಾಸುಗಳನ್ನು ನೆಲದ ಮೇಲೆ ಒಂದರ ಮೇಲೆ ಒಂದರಂತೆ ಹಾಸಿ ಹಾಸಿಗೆಯನ್ನು ಸಿದ್ಧಪಡಿಸಲಾಯಿತು. ಅನ್ನ ಮಾಡಲು ಒಂದು ಸೀಮೆಯೆಣ್ಣೆ ಸ್ಟೌ ಮತ್ತು ಎರಡು ಪಾತ್ರೆಗಳಿದ್ದವು. ಒಂದು ಬಾಣಲಿ, ಎರಡು ತಟ್ಟೆಗಳು, ಎರಡು ಲೋಟ, ಎರಡು ಡಬರಿಗಳು ಸಹ ಇದ್ದವು. ಇವುಗಳಲ್ಲಿ ಸ್ಟೌ, ತಟ್ಟೆಗಳು, ಲೋಟಗಳು ಮತ್ತು ಡಬರಿಗಳನ್ನು ನೂತನ್ ಸೋದರತ್ತೆ ಕೊಟ್ಟಿದ್ದರು. ಅಲ್ಯೂಮಿನಿಯಮ್ ಪಾತ್ರೆಗಳು ಮತ್ತು ಕಬ್ಬಿಣದ ಬಾಣಲಿ ಮತ್ತು ಚಿಮಿಟಗಳನ್ನು ಅಮ್ಮ ಖರೀದಿಸಿ ತಂದಿದ್ದರು.

ಅಪ್ಪನ ಮನೆಯಲ್ಲಿದ್ದಾಗ ನಮ್ಮ ಬಳಿ ಸಾಕಷ್ಟು ಪಾತ್ರೆಗಳಿದ್ದವು. ಎರಡುಮೂರು ಸೆಟ್ ಕ್ರಾಕರಿಗಳಿದ್ದವು. ಬೋನ್ ಚೀನಾದ ಕುಶಲ ಕಲೆಯ ಸುವರ್ಣ ವರ್ಣದ ಕ್ರಾಕರಿಗಳೂ ಇದ್ದವು. ಆದರೆ ಇಲ್ಲಿ ಚಹಾ ಕುಡಿಯಲು ಮಣ್ಣಿನ ಕಪ್ ಸಹ ಇರಲಿಲ್ಲ. ಆದರೆ ಅಮ್ಮನಲ್ಲಿ ಅಪಾರ ಧೈರ್ಯವಿತ್ತು.

‘ಗೃಹಸ್ಥ ಜೀವನಕ್ಕೆ ಬೇಕಾಗುವಂಥ ಸಾಮಾನುಗಳನ್ನು ನಂತರದಲ್ಲೂ ಕೊಳ್ಳಬಹುದು, ಆದರೆ ಮೊದಲು ನಿನ್ನ ಶಾಲೆಯ ಫೀಸ್ ಕಟ್ಟುವುದು ಮುಖ್ಯ’. ಅಮ್ಮ ಅದೊಂದು ದಿನ ಹೇಳಿದ್ದರು. ನಾನು ಅಮ್ಮನಿಂದ ಏನನ್ನೂ ಕೇಳುತ್ತಿರಲಿಲ್ಲ. ಅಮ್ಮ ಯಾವುದನ್ನೂ ಕೊಳ್ಳುವ ಸ್ಥಿತಿಯಲ್ಲಿಲ್ಲ ಎಂಬುದು ನನಗೆ ತಿಳಿದಿತ್ತು. ನಾನು ವಾಸ್ತವವಾಗಿ ಕಾಲಕ್ಕೆ ಮೊದಲೇ ದೊಡ್ಡವಳಾಗುತ್ತಿದ್ದೆ.

ಈ ಹೊಸ ಮನೆಯಲ್ಲಿ ನಾನು ಸ್ವತಂತ್ರವಾಗಿರಬಹುದಿತ್ತು. ಒಂದು ಕೋಣೆ, ಅದರೊಂದಿಗೆ ಅಂಟಿಕೊಂಡಂತೆ ಒಂದು ಚಿಕ್ಕ ಲೆಟ್ರಿನ್‌ಬಾತ್‌ರೂಮ್. ನಾನಿಲ್ಲಿ ಬೇಕಾದಂತೆ ಓಡಾಡಬಹುದಿತ್ತು. ನೂತನ್ ಸೋದರತ್ತೆಯವರ ಮನೆಯಲ್ಲಿ ಈ ಸ್ವಾತಂತ್ರ್ಯ ಇರಲಿಲ್ಲ. ಆ ಚಿಕ್ಕ ಕೋಣೆಯ ಒಂದು ಮೂಲೆಯಲ್ಲಿ ನಾವು ಅಡುಗೆ ಮನೆಯನ್ನು ಮಾಡಿಕೊಂಡಿದ್ದೆವು. ಹಾಸಿಗೆಯ ತಲೆದಿಂಬಿನ ಬಳಿಯ ಮೂಲೆಯಲ್ಲಿ ನನ್ನ ಪುಸ್ತಕಗಳುಕಾಪಿಗಳನ್ನು ಇಡಲಾಗಿತ್ತು. ಅತ್ತಇತ್ತ ಗೂಟ ಹೊಡೆದು ಅದಕ್ಕೆ ಹಗ್ಗ ಕಟ್ಟಲಾಗಿತ್ತು. ಆ ಹಗ್ಗದ ಮೇಲೆ ಅಮ್ಮನ ಸೀರೆಗಳನ್ನು ನೇತು ಹಾಕಲಾಗುತ್ತಿತ್ತು. ನಮ್ಮೆರಡೂ ಸೂಟ್‌ಕೇಸ್‌ಗಳು ನನ್ನ ಓದುಬರಹಕ್ಕೆ ಟೇಬಲ್ ಆಗಿದ್ದವು. ನಾನು ಯಾವ ಸ್ಟಾಪ್‌ನಿಂದ ಸ್ಕೂಲ್‌ಗೆ ಹೋಗಲು ಟೆಂಪೋ ಹಿಡಿಯಬೇಕಿತ್ತೋ, ಅದರ ಸಮೀಪದಲ್ಲಿಯೇ ನನ್ನ ಗೆಳತಿಯೊಬ್ಬಳ ಮನೆಯಿತ್ತು. ನಾವಿಬ್ಬರು ಜೊತೆಯಲ್ಲಿ ಶಾಲೆಗೆ ಹೋಗುತ್ತಿದ್ದೆವು, ಜೊತೆಯಲ್ಲಿಯೇ ಮರಳಿ ಬರುತ್ತಿದ್ದೆವು.

ಹೊಸ ಮನೆಗೆ ಬಂದ ಎರಡು ಮೂರು ದಿನಗಳಲ್ಲಿ ಅಮ್ಮನಿಗೆ ಒಂದು ಖಾಸಗಿ ಶಾಲೆಯಲ್ಲಿ ಅಧ್ಯಾಪಕಿಯ ಕೆಲಸ ಸಿಕ್ಕಿತು. ಈ ಕೆಲಸವನ್ನು ನೂತನ್ ಸೋದರತ್ತೆಯವರೇ ಕೊಡಿಸಿದ್ದರು. ಅಮ್ಮ, ತಮ್ಮ ಮೂರನೆಯ ವೇತನದಲ್ಲಿ ಒಂದು ಫೋಲ್ಡಿಂಗ್ ಮಂಚ ಖರೀದಿಸಿ ತಂದಿದ್ದರು.

‘ಇವತ್ತಿಂದ ನೀನು ಈ ಮಂಚದ ಮೇಲೆ ಮಲಗು’ ಅಮ್ಮ ಹೇಳಿದ್ದರು.

‘ನೀವು?’ ಆ ಮಂಚ ನಾವಿಬ್ಬರು ಮಲಗುವಷ್ಟು ದೊಡ್ಡದಾಗಿರಲಿಲ್ಲ, ಹೀಗಾಗಿ ಕೇಳಿದ್ದೆ.

‘ನಾನಿಲ್ಲೇ ಕೆಳಗೆ ಮಲಗ್ತೀನಿ.’

‘ಬೇಡ, ನೀವು ಮಂಚದ ಮೇಲೇ ಮಲಗಿ.’

‘ಇಲ್ಲ, ಇದನ್ನು ನಿನಗೇ ತಂದಿದ್ದೇನೆ. ಮುಂದಿನ ತಿಂಗಳು ನನಗೆ ತರ್ತೀನಿ.’ ಅಮ್ಮ ನನಗೆ ತಿಳಿಯಪಡಿಸಲು ಪ್ರಯತ್ನಿಸಿದ್ದರು.

‘ಸರಿ, ಅಲ್ಲಿಯವರೆಗೆ ಒಂದು ದಿನ ನೀವು, ಇನ್ನೊಂದು ದಿನ ನಾನು, ಹೀಗೆ ಮಲಗೋಣ. ಇಲ್ಲದಿದ್ರೆ ನಾನೆಂದೂ ಇದರ ಮೇಲೆ ಮಲಗಲ್ಲ.’ ನಾನು ಹಟ ಮಾಡಿ ನನ್ನ ತೀರ್ಮಾನ ಹೇಳಿದ್ದೆ.

‘ಸರಿ, ನೀನು ಹೇಳಿದಂತೆಯೇ ಆಗ್ಲಿ’ ಅಮ್ಮನ ಕಂಠ ಒತ್ತಿ ಬಂದಿತ್ತು. ಅವರ ಕಣ್ಣುಗಳು ತುಂಬಿ ಬಂದಿದ್ದವು.

‘ನನ್ನ ಮಗಳೇ! ನೀನೆಷ್ಟು ಮುದ್ದು! ನನ್ನಿಂದ ನಿನಗೇನೂ ಕೊಡಲಾಗ್ತಿಲ್ಲ.’ ಅಮ್ಮ ನನ್ನನ್ನು ತಬ್ಬಿಕೊಂಡಿದ್ದರು.

ಅಮ್ಮ ಶಾಲೆಯಿಂದ ಬರಲು ತಡವಾಗುತ್ತಿತ್ತು, ನಾನು ಅವರಿಗಿಂತ ಮೊದಲೇ ಮನೆಗೆ ಬರುತ್ತಿದ್ದೆ. ಅಮ್ಮನಿಗೆ ತೊಂದರೆಯಾಗಬಾರದೆಂದು ಮನೆಗೆ ಬಂದು ರೊಟ್ಟಿಪಲ್ಯ ಮಾಡಿಡುತ್ತಿದ್ದೆ. ರುಚಿಯಾಗಿ ಮಾಡಲು ಬರುತ್ತಿರಲಿಲ್ಲ, ಆದರೆ ಅಮ್ಮ ಸದಾ ನಾನು ಮಾಡುವ ತಿಂಡಿಯನ್ನು ಹೊಗಳುತ್ತಿದ್ದರು. ಒಂದು ಕೋಣೆಯ ಆ ಮನೆ ನನಗೆ ತುಂಬಾ ಇಷ್ಟವಾಗಿತ್ತು, ಏಕೆಂದರೆ ಈ ಮನೆಯಲ್ಲಿ ನಾನು ಮತ್ತು ಅಮ್ಮ ಭಾವನಾತ್ಮಕವಾಗಿ ಅತಿ ಸಮೀಪಕ್ಕೆ ಬಂದಿದ್ದೆವು. ನಾವು ಪರಸ್ಪರರಿಗೆ ಪೂರಕವಾಗಿದ್ದೆವು. ನಾನು ಅಮ್ಮನನ್ನು ಇನ್ನಷ್ಟು ಹೆಚ್ಚು ಅರ್ಥ ಮಾಡಿಕೊಳ್ಳಲಾರಂಭಿಸಿದ್ದೆ. ಅವರು ಪಡುವ ಕಷ್ಟ, ಅವರ ಸಮಸ್ಯೆಗಳು, ಅವರ ಸಂತೋಷ, ಅವರ ದುಃಖ ಕ್ರಮೇಣ ನನಗೆ ಅರ್ಥವಾಗುತ್ತಿತ್ತು. ನಾನೆಂದೂ ಯಾವುದಕ್ಕೂ ಹಟ ಮಾಡುತ್ತಿರಲಿಲ್ಲ. ನನಗೆ ಅವಶ್ಯಕತೆ ಇರುವಷ್ಟು ಮಾತ್ರ ಕಾಪಿ